# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 419
**ಸದಸ್ಯರ ಹೆಸರು** : ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ)
**ಉತ್ತರಿಸುವವರು** : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
**ಉತ್ತರಿಸಬೇಕಾದ ದಿನಾಂಕ** : 30.01.2026.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗೃಹಲಕ್ಷ್ಮಿ ಯೋಜನೆಯಡಿ ನೋಂದಾಯಿಸಿಕೊಂಡಿರುವವರ ಸಂಖ್ಯೆ ಎಷ್ಟು; ಈ ಪೈಕಿ ಸ್ವೀಕೃತಗೊಂಡಿರುವ ಮತ್ತು ತಿರಸ್ಕೃತ ಗೊಂಡಿರುವ ಅರ್ಜಿಗಳೆಷ್ಟು;(ವಿವರ ನೀಡುವುದು) | ಗೃಹಲಕ್ಷ್ಮಿ ಯೋಜನೆಯಡಿ ನವೆಂಬರ್-2025ರ ಮಾಹೆಯ ಅಂತ್ಯಕ್ಕೆ 1,28,88,617 ಫಲಾನುಭವಿಗಳು ನೋಂದಾಯಿಸಿಕೊಂಡಿರುತ್ತಾರೆ.<br><br>ಈ ಪೈಕಿ 1,24,13,912 ಅರ್ಹ ಫಲಾನುಭವಿಗಳಿಗೆ ಯಶಸ್ವಿಯಾಗಿ ಧನಸಹಾಯ ಪಾವತಿಸಲಾಗಿದೆ.<br><br>IT-GST ಕಾರಣಗಳಿಂದಾಗಿ 1,79,993 ಅರ್ಜಿಗಳು ತಿರಸ್ಕೃತಗೊಂಡಿದ್ದು, ಯೋಜನೆಯಡಿ ನೋಂದಣಿ ನಂತರ 2,53,045 ಫಲಾನುಭವಿಗಳು ಮರಣ ಹೊಂದಿರುತ್ತಾರೆ ಹಾಗೂ 44,950 ಫಲಾನುಭವಿಗಳಿಗೆ NPCI Failed ಕಾರಣಗಳಿಂದಾಗಿ ಧನಸಹಾಯ ಪಾವತಿಯಾಗುತ್ತಿರುವುದಿಲ್ಲ. |
| ಆ) | ಈ ಪೈಕಿ ಎಷ್ಟು ಫಲಾನುಭವಿಗಳಿಗೆ ಪ್ರತಿ ತಿಂಗಳು ಹಣ ಜಮೆಯಾಗುತ್ತಿದೆ; ಇದಕ್ಕೆ ಆಗುತ್ತಿರುವ ವೆಚ್ಚ ಎಷ್ಟು;(ವಿವರ ನೀಡುವುದು) | ಗೃಹಲಕ್ಷ್ಮಿ ಯೋಜನೆಯಡಿ ಧನಸಹಾಯ ಪಾವತಿಸಲಾದ ಫಲಾನುಭವಿಗಳ ಹಾಗೂ ಧನಸಹಾಯದ ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ. |
| ಇ) | ಅರ್ಜಿ ಸ್ವೀಕೃತಗೊಂಡಿದ್ದರೂ ಸಾವಿರಾರೂ ಜನ ಫಲಾನುಭವಿಗಳಿಗೆ ಹಣ ಬಿಡುಗಡೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಹಣ ಬಿಡುಗಡೆಯಾಗದಿರಲು ಕಾರಣಗಳೇನು; ಮತ್ತು ಫಲಾನುಭವಿಗಳ ಸಂಖ್ಯೆ ಎಷ್ಟು; | ಸರ್ಕಾರದ ಗಮನಕ್ಕೆ ಬಂದಿದೆ.<br><br>ಸರ್ಕಾರದ ಆದೇಶದ ದಿನಾಂಕ: 06.06.2023 ಮತ್ತು ದಿನಾಂಕ: 17.07.2023ರ ಸರ್ಕಾರದ ಮಾರ್ಗಸೂಚಿಯಲ್ಲಿ ಕುಟುಂಬದ ಯಜಮಾನಿ ಅಥವಾ ಆಕೆಯ ಪತಿ ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ ಅಥವಾ GST ರಿಟರ್ನ್ಸ್ ಸಲ್ಲಿಸುವವರಾಗಿದ್ದಲ್ಲಿ ಗೃಹಲಕ್ಷ್ಮಿ ಯೋಜನೆಯಡಿ ಧನಸಹಾಯ ಪಾವತಿಗೆ ಅರ್ಹರಿರುವುದಿಲ್ಲ.<br><br>ಗೃಹಲಕ್ಷ್ಮಿ ಯೋಜನೆಯಡಿ ನೋಂದಣಿಯಾಗಿದ್ದರೂ - IT-GST ಪಾವತಿದಾರರೆಂದು ಕಂಡುಬಂದಿರುವ ಫಲಾನುಭವಿಗಳಿಗೆ, ಮರಣ ಹೊಂದಿದ ಫಲಾನುಭವಿಗಳಿಗೆ, NPCI Failed, E-KYC Pending, Bank account inactive ಮುಂತಾದ ತಾಂತ್ರಿಕ ಸಮಸ್ಯೆಗಳಿರುವ ಒಟ್ಟು 4,56,656 ಫಲಾನುಭವಿಗಳಿಗೆ ಧನಸಹಾಯ ಪಾವತಿಯಾಗಿರುವುದಿಲ್ಲ. |
| ಈ) | ಅರ್ಜಿ ಸ್ವೀಕೃತಗೊಂಡಿರುವ ಎಲ್ಲಾ ಫಲಾನುಭವಿಗಳ ಖಾತೆಗೆ ತಕ್ಷಣ ಹಣ ಜಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಪ್ರತಿ ಮಾಹೆಯ ನೋಂದಣಿಗನುಸಾರವಾಗಿ ಆರ್ಥಿಕ ಇಲಾಖೆಗೆ ಪ್ರತಿ ಮಾಹೆ ಪ್ರಸ್ತಾವನೆ ಸಲ್ಲಿಸಿ, ಆರ್ಥಿಕ ಇಲಾಖೆಯಿಂದ ಅನುದಾನ ಬಿಡುಗಡೆಯಾದ ನಂತರ DBT ಮೂಲಕ ಅರ್ಹ ಫಲಾನುಭವಿಗಳ ಖಾತೆಗೆ ಧನಸಹಾಯ ಪಾವತಿಸಲಾಗುತ್ತಿದೆ. |

| | | |
|---|---|---|
| ಉ) | ನೊಂದಾಯಿಸಿಕೊಂಡಿರುವ ಫಲಾನುಭವಿಗಳ ಪೈಕಿ ಡಿಸೆಂಬರ್ 2025ರ ವರೆಗೆ ಎಷ್ಟು ಫಲಾನುಭವಿಗಳು ಮರಣ ಹೊಂದಿದ್ದಾರೆ? (ಜಿಲ್ಲಾವಾರು ವಿವರ ನೀಡುವುದು) | ಗೃಹಲಕ್ಷ್ಮಿ ಯೋಜನೆಯಡಿ ಡಿಸೆಂಬರ್-2025ರ ಮಾಹೆಯವರೆಗೆ ಮರಣ ಹೊಂದಿದ ಫಲಾನುಭವಿಗಳ ವಿವರವನ್ನು (ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯದಿಂದ ಪಡೆದ ಮಾಹಿತಿಯಂತೆ) ಅನುಬಂಧ-2ರಲ್ಲಿ ಒದಗಿಸಿದೆ. |

**ಸಂಖ್ಯೆ: ಮಮಇ 25 ಮಮಲ 2026**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

### ಅನುಬಂಧ-1

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 369(419)**

**ಗೃಹಲಕ್ಷ್ಮಿ ಯೋಜನೆಯಡಿ ಅನುದಾನ ಪಾವತಿಸಲಾದ ಮಾಹೆಯಾನ ವಿವರ**

| ಕ್ರ. ಸಂ | ಮಾಹೆ | ಯೋಜನೆಯಡಿ ನೋಂದಣಿಯಾದ ಫಲಾನುಭವಿಗಳ ಸಂಖ್ಯೆ | ಯಶಸ್ವಿಯಾಗಿ ಧನಸಹಾಯ ಪಾವತಿಯಾದ ಫಲಾನುಭವಿಗಳ ಸಂಖ್ಯೆ | ಧನಸಹಾಯ ಪಾವತಿಸಿದ ಮೊತ್ತ (ರೂ.ಕೋಟಿಗಳಲ್ಲಿ) |
|---|---|---|---|---|
| **2023-24** | | | | |
| 1 | ಆಗಸ್ಟ್-2023 | 10848006 | 10609155 | 2121.83 |
| 2 | ಸೆಪ್ಟಂಬರ್-2023 | 11441652 | 11017268 | 2203.45 |
| 3 | ಅಕ್ಟೋಬರ್-2023 | 11666036 | 11266335 | 2253.27 |
| 4 | ನವೆಂಬರ್-2023 | 11722982 | 11323837 | 2264.77 |
| 5 | ಡಿಸೆಂಬರ್-2023 | 11777328 | 11393652 | 2278.73 |
| 6 | ಜನವರಿ-2024 | 12107065 | 11584726 | 2316.95 |
| 7 | ಫೆಬ್ರವರಿ-2024 | 12305870 | 11812822 | 2362.56 |
| 8 | ಮಾರ್ಚ್-2024 | 12395327 | 12004970 | 2400.99 |
| **2024-25** | | | | |
| 9 | ಏಪ್ರಿಲ್-2024 | 12395327 | 12019577 | 2403.92 |
| 10 | ಮೇ-2024 | 12395327 | 12025235 | 2405.05 |
| 11 | ಜೂನ್-2024 | 12395327 | 12153219 | 2430.64 |
| 12 | ಜುಲೈ-2024 | 12504364 | 12183976 | 2436.80 |
| 13 | ಆಗಸ್ಟ್-2024 | 12516773 | 12157865 | 2431.57 |
| 14 | ಸೆಪ್ಟಂಬರ್-2024 | 12554479 | 12208705 | 2441.74 |
| 15 | ಅಕ್ಟೋಬರ್-2024 | 12583360 | 12272794 | 2454.56 |
| 16 | ನವೆಂಬರ್-2024 | 12624547 | 12214240 | 2442.85 |
| 17 | ಡಿಸೆಂಬರ್-2024 | 12659670 | 12194437 | 2438.89 |
| 18 | ಜನವರಿ-2025 | 12697316 | 12242835 | 2448.57 |
| **2025-26** | | | | |
| 19 | ಏಪ್ರಿಲ್-2025 | 12780063 | 12365080 | 2473.02 |
| 20 | ಮೇ-2025 | 12806158 | 12388763 | 2477.75 |
| 21 | ಜೂನ್-2025 | 12824433 | 12412543 | 2482.51 |
| 22 | ಜುಲೈ-2025 | 12843842 | 12228739 | 2445.75 |
| 23 | ಆಗಸ್ಟ್-2025 | 12859073 | 12413912 | 2482.78 |
| 24 | ಸೆಪ್ಟಂಬರ್-2025 | 12870568 | 12410629 | 2482.13 |
| 25 | ಅಕ್ಟೋಬರ್-2025 | 12880594 | ಧನಸಹಾಯ ಪಾವತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. | |
| 26 | ನವೆಂಬರ್-2025 | 12888617 | ಆರ್ಥಿಕ ಇಲಾಖೆಯಿಂದ ಅನುದಾನ ಬಿಡುಗಡೆಯಾಗಿದ್ದು, ಧನಸಹಾಯ ಪಾವತಿಗೆ ಕ್ರಮವಹಿಸಲಾಗುತ್ತಿದೆ. | |